**ದಿನಾಂಕ:18-10-2021 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಆರ್.ವಿ.ಡಬ್ಲ್ಯೂ ವಕೀಲರಿಂದ :**

ಆಸ್ತಿ ಸಂಖ್ಯೆ 106 ಅನ್ನು ಹಾಲಮ್ಮರವರಿಂದ ನೋಂದಾಯಿತ ಖರೀದಿ ಪತ್ರದ ಮೂಲಕ ಖರೀದಿಸಲಾಗಿದೆ. ಆ ಖರೀದಿ ಸುಮಾರು 1965 ರಲ್ಲಿ ಆಗಿದೆ, ತಾರೀಖು ಗೊತ್ತಿಲ್ಲ. ಖರೀದಿ ಪತ್ರ ನನ್ನ ಬಳಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಹಾಲಮ್ಮ ಹೆಬ್ಬೆಟ್ಟು ಹಾಕುತ್ತಿದ್ದರು. ನಾನು ಆಸ್ತಿ ಸಂಖ್ಯೆ 104 ಕ್ಕೆ ಸಂಬಂಧಪಟ್ಟಂತೆ ಒಂದು ಕೇವಿಯೇಟ್ ಅರ್ಜಿ ಸಲ್ಲಿಸಿದ್ದೆ. ಕೇವಿಯೇಟ್ ಅರ್ಜಿಯಲ್ಲಿ ಆಸ್ತಿಯ ವಿಸ್ತೀರ್ಣವನ್ನು ಬರೆದಿದ್ದೇನೆ. ನಾನು ಆಸ್ತಿ ಸಂಖ್ಯೆ 103,

104, 106, 107 ಮತ್ತು 108 ಕ್ಕೆ ಸಂಬಂಧಿಸಿದಂತೆ ಒಂದು ನಕಾಶೆ ಹಾಜರುಪಡಿಸಿದ್ದೇನೆ. ನಕಾಶೆಯಲ್ಲಿ ಆಸ್ತಿ ಸಂಖ್ಯೆ 103 ಎಂದು ಬರೆದಿದ್ದೇನೆ ಎಂದರೆ ಇರಬಹುದು. ಸದರಿ ನಕಾಶೆಯಲ್ಲಿ 5 ನೇ ಪ್ರತಿವಾದಿಯು ರಾಯಕರ್ ಮನೆತನದವರಿಗೆ ಖರೀದಿಕೊಟ್ಟಿದ್ದಾರೆ ಎಂದು ಬರೆಯಲಾಗಿದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ನನ್ನ ಆಸ್ತಿ ಆಜುಬಾಜು ಏನೇನು ಇದೆ ಎಂದು ಚೆಕ್ಕುಬಂದಿ ತೋರಿಸುವ ಸಲುವಾಗಿ ಅದನ್ನು ಬರೆಯಲಾಗಿದೆ ಎಂದು ನುಡಿಯುತ್ತಾರೆ. ಆಸ್ತಿ ಸಂಖ್ಯೆ 103 5 ನೇ ಪ್ರತಿ ವಾದಿಯ ಮನೆತನಕ್ಕೆ ಹೇಗೆ ಪ್ರಾಪ್ತವಾಯಿತು ಎಂದು ನನಗೆ ಗೊತ್ತಿಲ್ಲ. ಅದರ ಉದ್ದ ಅಗಲ 71x30 ಅಡಿ. ಸದರಿ ಅಳತೆಯನ್ನು ನಾನು ನಕಾಶೆಯಲ್ಲಿ ಕಾಣಿಸಿಲ್ಲ ಎಂದರೆ ಸರಿ. ಆಸ್ತಿ ಸಂಖ್ಯೆ 103 ಅನ್ನು ಹಾಲಮ್ಮ ಮತ್ತು ಕೇಶವರಾವ್ ರವರು ಮೇಲಗಿರಿ ಮನೆತನಕ್ಕೆ ಖರೀದಿಗೆ ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ.

ನಾನು ಪ್ರಥಮ ಪಿ.ಯು.ಸಿ ಓದಿದ್ದೇನೆ. ನಿ.ಪಿ.6 ರಲ್ಲಿ ಕಾಣಿಸಿದ ವೆಂಕಪ್ಪ ಎಂದರೆ 5 ನೇ ಪ್ರತಿವಾದಿಯ ಅಜ್ಜ. ನಿ.ಪಿ.6 ರ ಪ್ರಕಾರ 103 ಅನ್ನು ಮೇಲಗಿರಿ ಮನೆತನದವರು ಖರೀದಿಗೆ ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಸದರಿ ವಿಷಯ ಸಂಪೂರ್ಣವಾಗಿ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.6 ನೋಂದಾಯಿತ ಪತ್ರ ಎಂದರೆ ಸರಿ. ನಿ ಪಿ 6 ಕ್ಕೆ ಹಾಲವ್ವ ರವರು ಹೆಬ್ಬೆಟ್ಟಿನ ಗುರುತು ಹಾಕಿದ್ದಾರೆ ಎಂದರೆ ಹಾಗೆಂದು ಅದರಲ್ಲಿ ಬರೆದಿದೆ. ನಿ.ಪಿ.6 ರ ದಾಖಲೆ ನನ್ನ ಪ್ರಕಾರ ಸುಳ್ಳು ದಾಖಲೆಯಾಗಿದೆ. ನಿ.ಪಿ.6 ರ ದಾಖಲೆಯಿಂದ ನಿಮಗೆ ಅನಾನುಕೂಲತೆ ಆಗುತ್ತದೆಯೇ ಎಂದರೆ ಅನಾನುಕೂಲತೆ ಇದೆ. ನಿ.ಪಿ.6 ರ ದಾಖಲೆಯನ್ನು ನಾನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ. ನಿ.ಪಿ.6 ರ ಖರೀದಿ ಪತ್ರವು ಆಸ್ತಿ ಸಂಖ್ಯೆ 103 ಮತ್ತು 104 ಕ್ಕೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. 104 ಕ್ಕೆ ಸಂಬಂಧಪಟ್ಟಿಲ್ಲ. ನಿ.ಪಿ.6 ರ ದಾಖಲೆ ಆಸ್ತಿ ಸಂಖ್ಯೆ 104 ಕ್ಕೆ ಸಂಬಂಧಪಟ್ಟಿದೆ ಎಂದು ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆಸ್ತಿ ಸಂಖ್ಯೆ 106 ರ ಅಸಲು ಖರೀದಿ ಪತ್ರವನ್ನು ಹಾಜರುಪಡಿಸುತ್ತೇನೆ. ಆಸ್ತಿ ಸಂಖ್ಯೆ 104 ಸಂಪೂರ್ಣವಾಗಿ ನನಗೆ ಸೇರಿದ್ದು. ಆಸ್ತಿ ಸಂಖ್ಯೆ 104 ರ ನಿಜವಾದ ವಿವರಣೆ ನಿಮ್ಮ ಪ್ರಕಾರ ಏನು ಎಂದರೆ ಉತ್ತರಕ್ಕೆ ಆಸ್ತಿ ಸಂಖ್ಯೆ 103, ದಕ್ಷಿಣಕ್ಕೆ ನನಗೆ ಸೇರಿದ 106/1, ಪೂರ್ವಕ್ಕೆ ನಾವೇ ಮಾರಾಟ ಮಾಡಿದ 5 ನೇ ಪ್ರತಿವಾದಿಗೆ ಸೇರಿದ ಸ್ವಲ್ಪ ಜಾಗ, ಪಶ್ಚಿಮಕ್ಕೆ ಪಂಚಾಯತಿ ರಸ್ತೆ. ಆಸ್ತಿ ಸಂಖ್ಯೆ 104 ರ ಖರೀದಿ ಪತ್ರದಲ್ಲಿ ಅಡಿ ಮತ್ತು ಮೊಳದ ಲೆಕ್ಕದಲ್ಲಿ ವಿಸ್ತೀರ್ಣ ಕಾಣಿಸಿದ್ದಾರೆ. ದಿಃ 30-06-1965 ರಂದು ಗಂಗಮ್ಮ ಹಾಲಮ್ಮರವರಿಗೆ 20x27 ಮೊಳ ಜಾಗವನ್ನು ಖರೀದಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅದೇ ದಿನ ಗಂಗಮ್ಮ ರವರು ಹಾಲಮ್ಮರವರಿಗೆ ಆಸ್ತಿ ಸಂಖ್ಯೆ

104 ರ ಪೂರ್ವ ಭಾಗವನ್ನು ಮಾರಾಟ ಮಾಡಿದರು ಎಂದರೆ ಸುಳ್ಳು. ಅದೇ ದಿನ ಗಂಗಮ್ಮ ಹಾಲಮ್ಮರವರಿಂದ 106 ರ ಆಸ್ತಿಯನ್ನು ಖರೀದಿಸಿರುವುದು ಸರಿಯಾಗಿದೆ. ಎರಡು ಆಸ್ತಿಗಳಿಗೆ ಸಂಬಂಧಪಟ್ಟಂತೆ ಖರೀದಿ ಪತ್ರವು ಒಂದೇ ದಿನ ಆಗಿದ್ದರೂ ಸಹ ಗಂಗಮ್ಮ ಖರೀದಿಗೆ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಂಗಮ್ಮ ಹಾಲಮ್ಮರವರಿಗೆ ಖರೀದಿಗೆ ಕೊಟ್ಟ ವಿಷಯ ಹಾಗೂ ಹಾಲಮ್ಮ ರವರು ಪೂರ್ವ ಭಾಗವನ್ನು ಕೇಶವ ರಾವ್ ರವರಿಗೆ ಖರೀದಿಗೆ ಕೊಟ್ಟಿದ್ದಾರೆ ಎನ್ನುವ ವಿಷಯ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಗಂಗಮ್ಮನಿಗೆ 104 ರ ಪೂರ್ವ ಭಾಗದಲ್ಲಿ ಆಸ್ತಿ ಇಲ್ಲದೇ ಇದ್ದರೂ ಸಹ ನಮ್ಮ ಹಕ್ಕನ್ನು ಸ್ಥಾಪಿಸಿಕೊಳ್ಳುವ ಸಲುವಾಗಿ 2006 ರಲ್ಲಿ ಖೊಟ್ಟಿ ಖರೀದಿ ಪತ್ರವನ್ನು 5 ನೇ ಪ್ರತಿವಾದಿಯ ಹೆಸರಿಗೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಆಸ್ತಿ ಸಂಖ್ಯೆ 103 ಮತ್ತು 104 ರ ಪೂರ್ವ ಭಾಗವನ್ನು ಹಾಲಮ್ಮ ಮತ್ತು ಕಾಂಡೇಕರ್ ರವರು ಮೇಲಗಿರಿ ಮನೆತನಕ್ಕೆ ಖರೀದಿಗೆ ಕೊಟ್ಟು ಆ ಖರೀದಿಯ ಪ್ರಕಾರ ಮೇಲಗಿರಿ ಮನೆತನದವರಿಗೆ ಆ ಆಸ್ತಿಯಲ್ಲಿ ಹಕ್ಕು ಪ್ರಾಪ್ತವಾಗಿದೆ ಎಂದರೆ ಸರಿಯಲ್ಲ.

ನನ್ನ ಪ್ರತಿವಾದ ಪತ್ರದೊಂದಿಗೆ ಸಲ್ಲಿಸಿರುವ ಹಾತ ನಕಾಶೆಯನ್ನು ವಾಸ್ತವಾಂಶಗಳಿಗೆ ವ್ಯತಿರಿಕ್ತವಾಗಿ ಬರೆದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಆಸ್ತಿ ಸಂಖ್ಯೆ 104, 106 ಪಂಚಾಯತಿ ವ್ಯಾಪ್ತಿಯೊಳಗೆ ಮತ್ತು ಪಂಚಾಯತಿಯ ಆಡಳಿತಕ್ಕೆ ಒಳಪಟ್ಟ ಆಸ್ತಿ ಎಂದರೆ ಸರಿ. ನಿ.ಡಿ.4 ರ ದಾಖಲೆಯನ್ನು ಒಬ್ಬ ಗ್ರಾಮ ಲೆಕ್ಕಾಧಿಕಾರಿ ನೀಡಿದ್ದಾರೆ ಎಂದರೆ ಗೊತ್ತಿಲ್ಲ. ಒಬ್ಬ ಅಧಿಕಾರಿಯ ಬಳಿಯಿಂದ ಆತನ ವ್ಯಾಪ್ತಿಗೆ ಮೀರಿದ ಒಂದು ದಾಖಲೆಯನ್ನು ಪಡೆದುಕೊಂಡು ಅನಾವಶ್ಯಕವಾಗಿ ನಿ ಡಿ 4 ಅನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಿ ಡಿ 4 ರ ದಾಖಲೆಯು ಆಸ್ತಿ ಸಂಖ್ಯೆ 106/1 ಕ್ಕೆ ಸಂಬಂಧಿಸಿದ್ದಾಗಿದೆ ಎಂದು ನುಡಿಯುತ್ತಾರೆ. ನಾನು ಕಂದಾಯ ಇಲಾಖೆಯ ಅಧಿಕಾರಿಗಳಿಂದ ನಿ.ಡಿ.4 ರ ಸುಳ್ಳು ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ವ್ಯತಿರಿಕ್ತವಾದ ಅಳತೆಗಳನ್ನು ಬರೆಯಿಸಿ ಬೇರೆ ಬೇರೆ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಗಂಗಮ್ಮ 1995 ರೊಳಗೆ ತೀರಿಕೊಂಡಿರಬಹುದು. ಗಂಗಮ್ಮನ ಆಸ್ತಿ ಮೋಹನ ರಾವ್ ರವರಿಗೆ ಬರುವ ಹೊತ್ತಿಗೆ ಯಾವುದೇ ಬದಲಾವಣೆ ಆಗಿಲ್ಲ ಅಷ್ಟೇ ಇತ್ತು. 2012-13 ರ ಇ.ಸಿ ಯಲ್ಲಿ ಪೂರ್ವ ಪಶ್ಚಿಮ ಉತ್ತರ ದಕ್ಷಿಣದ ವಿಸ್ತೀರ್ಣ ಬರೆಯದೇ ಕೇವಲ 2670 ಚದರ ಅಡಿ ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ಬರೆದುಕೊಟ್ಟ ಖರೀದಿ ಪತ್ರದಲ್ಲಿ 3330 ಚೌರಸ ಫೂಟ ಎಂದು ನಮೂದಿಸಲಾಗಿದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಆಸ್ತಿ ಸಂಖ್ಯೆ 104 ರ ಉದ್ದ ಅಗಲ ಅಳತೆ ಎಷ್ಟೆಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಗಂಗಮ್ಮ 1960 ರಲ್ಲಿ ಖರೀದಿಸಿದ ಖರೀದಿ ಪತ್ರದ

ಪ್ರಕಾರ ನಮ್ಮ ಆಸ್ತಿಯನ್ನು ನಮಗೆ ಬೇಕಾದ ಹಾಗೆ ಬೇಕಾಬಿಟ್ಟಿಯಾಗಿ ಅಳತೆ ತೋರಿಸುತ್ತಾ ಬಂದಿದ್ದೇನೆ ಎಂದರೆ ಸರಿಯಲ್ಲ. 1965 ರಲ್ಲಿ ಗಂಗಮ್ಮ ಹಾಲಮ್ಮ ರವರಿಗೆ ಖರೀದಿಗೆ ಕೊಟ್ಟಿರುವ ಆಸ್ತಿಯನ್ನು ನಾನು ಯಾವುದೇ ರೀತಿಯಲ್ಲಿ ಪರಿಗಣಿಸಿಲ್ಲ ಎಂದರೆ ಸರಿಯಲ್ಲ. ನಾನು ದಾವೆಗೆ ಸಂಬಂಧ ಇಲ್ಲದ ಮೇಲಗಿರಿ ಮನೆತನದವರ ಆಸ್ತಿಯ ಹಲವಾರು ಉತಾರುಗಳನುಖ್ನ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಆ ದಾಖಲೆಗಳಿಗೂ ಈ ಕೇಸಿಗೂ ಸಂಬಂಧ ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅವರು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಎಂದು ತೋರಿಸುವ ಬಗ್ಗೆ ಆ ದಾಖಲೆಗಳನ್ನು ಹಾಜರುಪಡಿಸಿದ್ದೇನೆಂದು ಸಾಕ್ಷಿ ನುಡಿಯುತ್ತಾರೆ. ವಾದಿ, 5 ಮತ್ತು 6 ನೇ ಪ್ರತಿವಾದಿಯ ಮನೆತನಕ್ಕೆ ಸೇರಿದ ಎಲ್ಲಾ ಆಸ್ತಿಗಳನ್ನು ವಿಭಾಗ ಮಾಡಿಕೊಳ್ಳದೇ ಕೆಲವು ಆಸ್ತಿಗಳನ್ನು ಒಟ್ಟಿಗೆ ಇಟ್ಟುಕೊಂಡಿದ್ದಾರೆ ಎಂದರೆ ಸರಿಯಲ್ಲ ಅವರು ಎಲ್ಲಾ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ. ಅವರು ಆಸ್ತಿ ಸಂಖ್ಯೆ 103, 104, 106, 107 ಮತ್ತು 108 ಅನ್ನು ಒಟ್ಟಿಗೆ ಇಟ್ಟುಕೊಂಡು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ